**ಪಿ ಅಂಡ್ ಎಸ್‌ಸಿ ಸಂಖ್ಯೆಃ 14/2026**
**PW.2**

**ಸಾಕ್ಷಿಯನ್ನು ದಿನಾಂಕಃ 30.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

1. ಈ ದಿನ ನನ್ನ ಮುಖ್ಯ ಪರೀಕ್ಷೆಯ ಸಲುವಾಗಿ ಪ್ರಮಾಣೀಕರಿಸಿದ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿದ್ದು, ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ನನ್ನ ಹೇಳಿಕೆಯ ಪ್ರಕಾರ ಬರೆಯಲಾಗಿದ್ದು, ಅವುಗಳನ್ನು ಓದಿ ತಿಳಿದುಕೊಂಡು, ಅದಕ್ಕೆ ನನ್ನ ಸಹಿ ಮಾಡಿದ್ದೇನೆ.

2. ಮೃತ ಚನ್ನಯ್ಯ ಉರುಫ್ ಚನ್ನೇಗೌಡ ಇವರು ನನ್ನ ಸಮಕ್ಷಮದಲ್ಲಿ ನಿಪಿ.1 ಮೃತ್ಯು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಅದರ ಮೇಲೆ ಅವರ ಹೆಬ್ಬೆಟ್ಟಿನ ಸಹಿಗಳು ಇರುತ್ತವೆ. ಸಾಕ್ಷಿಯು ಸದರಿ ಹೆಬ್ಬೆಟ್ಟಿನ ಸಹಿಗಳನ್ನು ಗುರುತಿಸಿರುತ್ತಾರೆ. ನಿಪಿ.1 ರ ಮೇಲೆ ನನ್ನ ಸಹಿಗಳನ್ನು ನಿಪಿ.1 (ಎ ಮತ್ತು ಬಿ ) ಎಂದು ಗುರುತಿಸಲಾಯಿತು. ನಿಪಿ.1 ರ ಮೇಲೆ ಇನ್ನೊಬ್ಬ ಸಾಕ್ಷಿದಾರ ಎಂ.ಎಸ್.ನಾಗರಾಜೇಗೌಡ ಎನ್ನುವವರೂ ಕೂಡ ಸಹಿ ಮಾಡಿರುತ್ತಾರೆ. ಅವರ ಸಹಿಗಳನ್ನು ನಿಪಿ.1(ಸಿ ಮತ್ತು ಡಿ) ಎಂದು ಗುರುತಿಸಲಾಯಿತು.

3. ಮೃತ ಚನ್ನಯ್ಯ ಉರುಫ್ ಚನ್ನೇಗೌಡ ಇವರು ಮೃತ್ಯು ಪತ್ರವನ್ನು ಬರೆದುಕೊಡುವ ಕಾಲಕ್ಕೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿದ್ದರು ಮತ್ತು ತಾನು ಮಾಡುತ್ತಿರುವ ಕೆಲಸಗಳ ಬಗ್ಗೆ ಸ್ವತಂತ್ರವಾಗಿ ತೀರ್ಮಾನ ಮಾಡುವ ಸಾಮರ್ಥ್ಯ ಇತ್ತು.

**ಪಾಟೀ ಸವಾಲುಃ** ಎದುರುದಾರರು ಯಾರು ಹಾಜರಾಗಿರುವುದಿಲ್ಲ ಕಾರಣ ಪಾಟೀ ಸವಾಲು ಇಲ್ಲ ಎಂದುತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ** ಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಇ.

**(ಮಧ್ವೇಶ ಡಬೇರ)**

4 ನೇ ಅಪರ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ಮಂಡ್ಯ